ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/ಎಡಿಎಂಐ೦/ಇಎಸ್‌ಟಿ(16)/32/2024 | 1601

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560001.
ದಿನಾಂಕ: 02-01-2025

**ಅಧಿಕೃತ ಜ್ಞಾಪನ**

ವಿಷಯ: ಶ್ರೀಮತಿ ಶೈಲಜಾ ಎನ್. ಹಿರೇಮಠ, ಪ್ರ.ದ.ಸ., ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು (ಅನುದಾನಿತ), ಹುಬ್ಬಳ್ಳಿ ಇವರುಗಳು ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1. ಪ್ರಾಂಶುಪಾಲರು, ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು (ಅನುದಾನಿತ), ಹುಬ್ಬಳ್ಳಿ ಇವರ ಪತ್ರ ಸಂ: ಬಿವ್ಹಿಬಿ/ಇಎಸ್‌ಟಿ/215/ಎಸ್‌ಆರ್‌ಎಸ್/2024-25/177(ಎ), ದಿನಾಂಕ:06.06.2024
2. ಪ್ರಾಂಶುಪಾಲರು, ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು (ಅನುದಾನಿತ), ಹುಬ್ಬಳ್ಳಿ ಇವರ ಪತ್ರ ಸಂಖ್ಯೆ: ಬಿವ್ಹಿಬಿ/ಇಎಸ್‌ಟಿ/ವಿಆರ್‌ಎಸ್/2024-25/482, ದಿನಾಂಕ:10.08.2024
3. ಸರ್ಕಾರದ ಪತ್ರ ಸಂಖ್ಯೆ: ಇಡಿ/14/ಟಿಪಿಇ/2023, ದಿನಾಂಕ:08.04.2024

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರಲ್ಲಿ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀಮತಿ ಶೈಲಜಾ ಎನ್. ಹಿರೇಮಠ, ಪ್ರ.ದ.ಸ.,ಇವರು ದಿನಾಂಕ:22.03.2024 ರಂದು ವೈಯಕ್ತಿಕ ಕಾರಣಗಳಿಂದಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗದ ಕಾರಣ ದಿನಾಂಕ:30.06.2024 ರಿಂದ ಅನ್ವಯವಾಗುವಂತೆ ಸ್ವ-ಇಚ್ಛಾ ನಿವೃತ್ತಿ ಹೊಂದಲು ಅನುಮತಿ ನೀಡವಂತೆ ಕೋರಿ ಮನವಿ ಸಲ್ಲಿಸಿದ್ದು, ಸದರಿಯವರ ಮನವಿಯಂತೆ ದಿನಾಂಕ:30.06.2024 ರಂದು ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಸಂಬಂಧ ಆಡಳಿತ ಮಂಡಳಿಯು ಒಪ್ಪಿಗೆ ನೀಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಶ್ರೀಮತಿ ಶೈಲಜಾ ಎನ್. ಹಿರೇಮಠ, ಪ್ರ.ದ.ಸ., ಇವರು ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು (ಅನುದಾನಿತ), ಹುಬ್ಬಳ್ಳಿ ಸಂಸ್ಥೆಯಲ್ಲಿ ದಿನಾಂಕ:30.12.1993 ರಂದು ಸೇವೆಗೆ ಸೇರಿದ್ದು, ಸ್ವಯಂ ನಿವೃತ್ತಿ ಹೊಂದಲು ಕೋರಿರುವ ದಿನಾಂಕ:30.06.2024 ಕ್ಕೆ ಒಟ್ಟು 30 ವರ್ಷ 06 ತಿಂಗಳು 01 ದಿವಸ ಸತತವಾಗಿ ಸೇವೆ ಸಲ್ಲಿಸಿದಂತಾಗುತ್ತದೆ ಹಾಗೂ ಸದರಿ ಸಿಬ್ಬಂದಿಯವರು ಸ್ವ-ಇಚ್ಛಾ ನಿವೃತ್ತಿ ಹೊಂದಲಿರುವ ದಿನಾಂಕಕ್ಕೆ 50 ವರ್ಷ 11 ತಿಂಗಳು 09 ದಿನಗಳ ವಯೋಮಾನ ಹೊಂದಿರುತ್ತಾರೆ.

ಪ್ರಾಂಶುಪಾಲರ ಪತ್ರಗಳಲ್ಲಿ ಸದರಿ ಸಿಬ್ಬಂದಿಯವರು ವೇತನಾನುದಾನಕ್ಕೊಳಪಟ್ಟ ದಿನಾಂಕದಿಂದ ಪ್ರಸ್ತುತದವರೆಗೆ ಅನಧಿಕೃತ ಗೈರು ಹಾಜರಾಗಿರುವುದಿಲ್ಲ, ನೇಮಕಾತಿ ದಿನಾಂಕದಿಂದ ಪ್ರಸ್ತುತದವರೆಗೆ ಸೇವಾಭಂಗವಿಲ್ಲದೆ ಸದರಿ ಸಂಸ್ಥೆಯಲ್ಲಿ ನಿರಂತರ ಸೇವೆ ಸಲ್ಲಿಸಿರುತ್ತಾರೆ, ನೇಮಕಾತಿ/ ಮುಂಬಡ್ತಿ/ ವೇತನ ನಿಗಧಿಗೆ ಸಂಬಂಧಿಸಿದಂತೆ ಇಲಾಖಾ/ ನ್ಯಾಯಾಲಯ ವಿಚಾರಣೆಗಳು ಮತ್ತು ಮಹಾಲೇಖಪಾಲರ/ಇಲಾಖಾ ಲೆಕ್ಕತಪಾಸಣಾ ಆಕ್ಷೇಪಣಾ ಕಂಡಿಕೆಗಳು ಬಾಕಿಯಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದರೆ ಇಲಾಖಾ ಲೆಕ್ಕ ತಪಾಸಣೆಯಲ್ಲಿ ಜೀವ ವಿಮೆ ಪಾಲಿಸಿ ಬಗ್ಗೆ ಆಕ್ಷೇಪಣೆ ಕಂಡಿಕ ಕಂಡು ಬಂದಿದ್ದು, ಸದರಿ ಆಕ್ಷೇಪಣೆ ತೀರುವಳಿಯಾಗಿರುವ ಬಗ್ಗೆ ಕಡತದಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಶೈಲಜಾ ಎನ್. ಹಿರೇಮಠ, ಪ್ರ.ದ.ಸ., ಇವರು ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು (ಅನುದಾನಿತ), ಹುಬ್ಬಳ್ಳಿ ಇವರಿಗೆ ಟಿಬಿಎಸ್ ನಿಯಮಾವಳಿಯ

...2

ನಿಯಮ (15)ರ ಟಿಪ್ಪಣಿ(1) ರನ್ವಯ ಸದರಿಯವರು ಸ್ವಯಂ ನಿವೃತ್ತಿ ಹೊಂದಲು ಅರ್ಹರಾಗಿದ್ದು, ಲೆಕ್ಕ ತಪಾಸಣಾ ಆಕ್ಷೇಪಣೆಯನ್ನು ತೀರುವಳಿಗೊಳಿಸುವ ಷರತ್ತಿಗೊಳಪಟ್ಟು ಕೆ.ಸಿ.ಎಸ್. ನಿಯಮಾವಳಿಗಳು 1958 ನಿಯಮ 285(1)ಎ ಮತ್ತು 285(2) ರ ಪ್ರಕಾರ ಹಾಗೂ ಉಲ್ಲೇಖ(4)ರ ಸರ್ಕಾರದ ಪತ್ರದನ್ವಯ ದಿನಾಂಕ:30.06.2024 ರಂದು ಅಪರಾಹ್ನ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಘಟನೋತ್ತರ ಅನುಮತಿ ನೀಡಲಾಗಿದೆ.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕಶಿಕ್ಷಣಇಲಾಖೆ**

**ಇವರಿಗೆ:**

1. ಪ್ರಾಂಶುಪಾಲರು, ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು (ಅನುದಾನಿತ), ಹುಬ್ಬಳ್ಳಿ -ಇವರಿಗೆ ಮುಂದಿನ ಕ್ರಮಕ್ಕಾಗಿ.
2. ಆಡಳಿತ ಮಂಡಳಿ, ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು (ಅನುದಾನಿತ), ಹುಬ್ಬಳ್ಳಿ - ಇವರಿಗೆ ಮುಂದಿನ ಕ್ರಮಕ್ಕಾಗಿ.
3. ಶ್ರೀಮತಿ ಶೈಲಜಾ ಎನ್. ಹಿರೇಮಠ, ಪ್ರ.ದ.ಸ. (ಪ್ರಾಂಶುಪಾಲರ ಮುಖಾಂತರ).
4. ಲೆಕ್ಕಾಧಿಕಾರಿಗಳು, ಟಿಬಿಎಸ್ ವಿಭಾಗ - ಇವರಿಗೆ ಮಾಹಿತಿಗಾಗಿಲ
5. ಲೆಕ್ಕಾಧಿಕಾರಿಗಳು, ಬಿಲ್ಸ್ ವಿಭಾಗ - ಇವರಿಗೆ ಮಾಹಿತಿಗಾಗಿ.
6. ಸಂಯೋಜಕರು, ಹೆಚ್.ಆರ್.ಎಂ.ಎಸ್. ವಿಭಾಗ - ಇವರಿಗೆ ಮಾಹಿತಿಗಾಗಿ
7. ಕಛೇರಿ ಪ್ರತಿ.